

بسم الله الرّحمٰن الرّحيم

# ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಅಲ್ಲಾಹನಿಂದ ಲಭಿಸಿದ ಅದ್ಭುತಕರವಾದ ಸಹಾಯ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಪಂಚಮ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನ್‌ನ **'ಬೈತುಲ್ ಫುತೂಹ್'** ಮಸೀದಿಯಲ್ಲಿ **12-12-2014** ರಂದು ನೀಡಿದ **ಜುಮುಅ ಖುತುಬದ ಸಾರಾಂಶ**)

*(ತಶಹ್ಹುದ್, ತಅವ್ವುಝ್, ಸೂರತುಲ್ ಫಾತಿಹಾ ತಿಲಾವತ್ ಮಾಡಿದ ನಂತರ)* ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ *ಹೀಗೆ ಹೇಳಿದರು:*

ಇಂದಿನ ಖುತುಬದಲ್ಲಿ ಸಹ ನಾನು ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ವಿವರಿಸಿದ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಸಂಬಂಧಿಸಿದ ಕೆಲವು ಘಟನೆಗಳನ್ನು ಪ್ರಸ್ತಾಪಿಸುವೆನು. ಈ ಘಟನೆಗಳಿಂದ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಉನ್ನತ ಸ್ಥಾನ ಮತ್ತು ಅಲ್ಲಾಹನು ಅವರಿಗೆ ನೀಡಿದ ಸಹಾಯದ ಚಿತ್ರಣ ಸಿಗುತ್ತದೆ.

ಪವಿತ್ರ ಖುರ್‌ಆನ್‌ನ ಸೂರಃ ಯೂನುಸ್‌ನಲ್ಲಿ ಅಲ್ಲಾಹನು ಪ್ರವಾದಿ ಯೂನುಸ್ ಅಲೈಹಿಸ್ಸಲಾಮ್ ಹೀಗೆ ಹೇಳಿದುದಾಗಿ ಪ್ರಸ್ತಾಪಿಸಿದ್ದಾನೆ.

**فَقَدْ لَبِثْتُ فِيكُمْ عُمُرًا مِنْ قَبْلِهِ أَفَلَا تَعْقِلُونَ**

ಫಖದ್ ಲಬಿಸ್‌ತು ಫೀಕುಮ್ ಉಮುರನ್ ಮಿನ್ ಖಬ್‌ಲಿಹೀ ಅಫಲಾ ತಅ್‌ಖಿಲೂನ್

ಇದಕ್ಕೆ ಮುಂಚೆ ಒಂದು ದೀರ್ಘಕಾಲ ನಾನು ನಿಮ್ಮ ಮಧ್ಯೆ ಜೀವಿಸುತ್ತಿದ್ದೆನಲ್ಲವೇ? ಆದರೂ ನೀವು ಮನವರಿಕೆ ಮಾಡುವುದಿಲ್ಲವೇ? (ಪವಿತ್ರ ಖುರ್‌ಆನ್ 10: 17)

ಇದು ಪ್ರವಾದಿಯ ಸತ್ಯತೆಯನ್ನು ತಿಳಿದುಕೊಳ್ಳಲು ಇರುವ ಒಂದು ತತ್ವವಾಗಿದೆ. ಪ್ರವಾದಿಯ ಹಿಂದಿನ ಕಾಲದ ಜೀವಿತ ಪ್ರವಾದಿಯ ಸತ್ಯ ಸಂಧತೆಯನ್ನು ಅರಿತು ಕೊಳ್ಳಲಿರುವ ಮಾರ್ಗವಾಗಿದೆ. ಖಾದಿಯಾನ್‌ನಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ವಿರುದ್ಧ ಭಾಷಣ ಮಾಡಲು ಮುಸ್ಲಿಮ್ ಮತಪಂಡಿತರು ಜಮಾಯಿಸಿದರು. ಅವರು ನಿಂದಿಸಿ ಭಾಷಣ ಮಾಡಿದರು. ಅವರ ಉದ್ದೇಶ ಗಲಬೆ ಗೊಂದಲಗಳನ್ನು ಉಂಟುಮಾಡುವುದಾಗಿತ್ತು. ಅಲ್ಲಾಹನ ಅನುಗ್ರಹದಿಂದ ಅಲ್ಲಿ ಗಲಬೆಗಳು ಉಂಟಾಗಲಿಲ್ಲ. ಅನಂತರ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಆ ಮತಪಂಡಿತರ ಆಕ್ಷೇಪಗಳಿಗೆ ಉತ್ತರ ನೀಡಿದರು ಮತ್ತು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಸತ್ಯತೆಯನ್ನು ಸಾಬೀತುಗೊಳಿಸಿದರು.

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೀಗೆ ಹೇಳುತ್ತಾರೆ: ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಮಹ್‌ದೀ ಮಸೀಹ್ ಎಂದು ವಾದಿಸುವುದಕ್ಕೆ ಮೊದಲಿನ ಅವರ ಜೀವಿತವನ್ನು ನೋಡುವುದಾದರೆ ಅವರು ಪದೇ ಪದೇ ಇಲ್ಲಿನ ಹಿಂದೂ, ಸಿಖ್ ಮತ್ತು ಮುಸ್ಲಿಮರಿಗೆ, ನೀವು ನನ್ನ ಹಿಂದಿನ ಕಾಲದ ಜೀವಿತದ ಬಗ್ಗೆ ಆಕ್ಷೇಪ ಮಾಡಲು ಸಾಧ್ಯವಿದೆಯೇ? ಎಂದು ಕೇಳುತ್ತಿದ್ದರು. ಆದರೆ, ಯಾರಿಗೂ ಅವರ ವಿರುದ್ಧ ಆಕ್ಷೇಪ ಮಾಡಲು ಧೈರ್ಯ ಉಂಟಾಗಲಿಲ್ಲ. ಅವರ ಜೀವಿತದ ಪರಿಶುದ್ಧಿಯನ್ನು ಆ ಜನರು ಅಂಗೀಕರಿಸುತ್ತಿದ್ದರು. ಅವರ ಹಿಂದಿನ ಕಾಲದ ಜೀವಿತ ಸಂಪೂರ್ಣವಾಗಿ ಪರಿಶುದ್ಧವಾಗಿತ್ತು ಅಥವಾ ಯಾವುದೇ ಆಕ್ಷೇಪ ಮಾಡಲು ಅಸಾಧ್ಯಕರವಾಗಿತ್ತೆಂದು ಪ್ರತಿಯೊಬ್ಬರು ಸಾಕ್ಷ್ಯ ನೀಡುತ್ತಿದ್ದರು. ಆದುದರಿಂದ ನಲ್ವತ್ತು ವರ್ಷಗಳ ಕಾಲ ಪರಿಶುದ್ಧ ಜೀವನ ನಡೆಸಿದ ಓರ್ವ ವ್ಯಕ್ತಿ ರಾತ್ರಿ ಹಗಲಾಗುವುದರೊಳಗೆ ಬಿಗಡಾಯಿಸಲು ಹೇಗೆ ತಾನೆ ಸಾಧ್ಯ? ಸ್ವಭಾವಕ್ಕೆ ಸಂಬಂಧಿಸಿದ ಕೆಡುಕುಗಳು ಮೆಲ್ಲ ಮೆಲ್ಲನೆ ತಲೆದೋರುತ್ತವೆ ಎಂದು ಮನಶ್ಶಾಸ್ತ್ರಜ್ಞರು ಸಹ ಹೇಳುತ್ತಾರೆ. ತಕ್ಷಣವಾಗಿ ಸ್ವಭಾವ ಬದಲಾವಣೆ ಆಗಲಾರದು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ವಾದದ ಹಿಂದಿನ ಕಾಲದ ಜೀವಿತ ಎಷ್ಟು ನಿಷ್ಕಳಂಕವಾಗಿತ್ತು ಎಂದರೆ ಅವರ ವಿರುದ್ಧ ಆಕ್ಷೇಪಿಸಲು ಯಾರಿಗೂ ಧೈರ್ಯ ಉಂಟಾಗಲಿಲ್ಲ.

ಇನ್ನೊಂದು ಕಡೆ ಪವಿತ್ರ ಖುರ್‌ಆನ್‌ನ ಸೂರಃ ಮುಅ್‌ಮಿನ್‌ನಲ್ಲಿ ಅಲ್ಲಾಹನು ಹೀಗೆ ಹೇಳಿದ್ದಾನೆ: **إِنَّا لَنَنصُرُ رُسُلَنَا ಇನ್ನಾಲನನ್ಸುರು ರುಸುಲನಾ** "ನಿಶ್ಚಯವಾಗಿಯೂ ನಾವು ನಮ್ಮ ಸಂದೇಶವಾಹಕರಿಗೆ ಸಹಾಯ ನೀಡುವೆವು" (ಪವಿತ್ರ ಖುರ್‌ಆನ್ 40: 52) ಅಲ್ಲಾಹನ ಸಹಾಯ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಹೇಗೆ ದೊರಕಿತು ಎನ್ನುವುದರ ಬಗ್ಗೆ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೀಗೆ ವಿವರಿಸುತ್ತಾರೆ:

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ವಧಿಸಲು ವಿವಿಧ ರೀತಿಗಳಲ್ಲಿ ಶತ್ರುಗಳು ಪ್ರಯತ್ನಿಸಿದರು. ಅವರನ್ನು ಕೊಲ್ಲಲು ಹತ್ಯೆಗಾರರನ್ನು ನೇಮಿಸಲಾಯಿತು. ಕೊಲೆಗೆ ಪ್ರಯತ್ನ ಮಾಡಿದರೆಂಬ ಸುಳ್ಳು ಆರೋಪ ಅವರ ಮೇಲೆ ಹೊರಿಸಿ ಮೊಕದ್ದಮೆ ಹೂಡಿದರು. ಹಾಗೆ ಡಾಕ್ಟರ್ ಮಾರ್ಟಿನ್ ಕ್ಲಾರ್ಕ್‌ರನ್ನು ವಧಿಸಲು ಮಸೀಹ್ ಮೌಊದ್ ಅಲೈಹಿಸ್ಸಲಾಮರು ಶ್ರಮಿಸಿದರೆಂಬ ಸುಳ್ಳು ಮೊಕದ್ದಮೆ ದಾಖಲಿಸಲಾಯಿತು. ಓರ್ವ ಯುವಕ, ತನ್ನನ್ನು ಮಿರ್ಝಾ ಸಾಹೇಬರು ಇದಕ್ಕಾಗಿ ಕಳುಹಿಸಿದರು ಎಂಬ ಸುಳ್ಳು ಹೇಳಿಕೆಯನ್ನು ಸಹ ನೀಡಿದ. ಈ ಮೊಕದ್ದಮೆಯನ್ನು ವಿಚಾರಣೆ ಮಾಡಲು ಬಂದ ಮ್ಯಾಜಿಸ್ಟ್ರೇಟ್ ಮೊದಲು ಹೀಗೆ ಹೇಳಿದ್ದರು. ಮಹ್‌ದೀ ಮಸೀಹ್ ಎಂದು ವಾದಿಸುವ ಈತನನ್ನು ಇಷ್ಟರ ತನಕ ಯಾರಾದರೂ ಏಕೆ ಹಿಡಿಯಲಿಲ್ಲ? ನಾನು ಇವನನ್ನು ಹಿಡಿಯುವೆನು. ಆದರೆ, ಮಾರ್ಟಿನ್ ಕ್ಲಾರ್ಕ್ ದಾಖಲಿಸಿದ ಸುಳ್ಳು ಮೊಕದ್ದಮೆಯ ವಿಚಾರಣೆ ಮಾಡಲು ಬಂದ ನ್ಯಾಯದೀಶ ಮೇಲಿನಂತೆ ಹೇಳಿದ್ದರೂ ಮೊಕದ್ದಮೆ ವಿಚಾರಣೆ ನಡೆಸಿದಾಗ ಅವರು ಹೇಳಿದರು: ನನ್ನ ಅಭಿಪ್ರಾಯದಲ್ಲಿ ಇದು ಸುಳ್ಳು ಆರೋಪವಾಗಿದೆ ಎಂದು.

ಹಾಗೆ, ಅಲ್ಲಾಹನು ಸುಳ್ಳು ಆರೋಪಗಳಿಂದ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ರಕ್ಷಿಸಿದನು. ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೀಗೆ ಹೇಳುತ್ತಾರೆ: ನಮ್ಮ ಜಮಾಅತಿನ ಉತ್ಸಾಹಭರಿತ ಮುಬಲ್ಲಿಗರಾದ ಮೌಲವಿ ಉಮರ್ ದೀನ್ ಸಾಹೇಬ್ ಶಿಮ್ಲವೀ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಸತ್ಯತೆಯನ್ನು ಕಂಡು ಕೊಂಡದ್ದು ಹೀಗೆ. ಅವರು ಹೇಳುತ್ತಾರೆ: ಶಿಮ್ಲದಲ್ಲಿ ಮೌಲವಿ ಮುಹಮ್ಮದ್ ಹುಸೈನ್, ಮೌಲವಿ ಅಬ್ದುರ್ರಹ್ಮಾನ್ ಸಯ್ಯಾಹ್ ಮತ್ತು ಬೇರೆ ಕೆಲವರು ಮಿರ್ಝಾ ಸಾಹೇಬರನ್ನು ಇನ್ನು ಮುಂದೆ ಹೇಗೆ ಎದುರಿಸಬೇಕೆಂದು ಸಮಾಲೋಚನೆ ನಡೆಸುತ್ತಿದ್ದರು. ಮೌಲವಿ ಅಬ್ದುರ್ರಹ್ಮಾನ್ ಹೀಗೆ ಹೇಳಿದರು: 'ನಾನು ಇನ್ನು ಮುಂದೆ ವಾದ ಪ್ರತಿವಾದದಲ್ಲಿ ಭಾಗವಹಿಸಲಾರೆ' ಎಂದು ಮಿರ್ಝಾ ಸಾಹೇಬ್ ಪ್ರಕಟಿಸಿದ್ದಾರೆ. ನಾವು ವಾದ ಪ್ರತಿವಾದಕ್ಕೆ ಆಮಂತ್ರಣ ನೀಡಿ ಪ್ರಕಟಣೆ ನೀಡೋಣ. ಅವರು ಅದಕ್ಕೆ ಸಿದ್ಧರಾದರೆ ನಾವು ಹೇಳುವೆವು: ನೀವು ಸುಳ್ಳು ಹೇಳಿದಿರಿ. ನಾನು ಯಾರೊಡನೆಯೂ ವಾದ ಪ್ರತಿವಾದ ಮಾಡಲು ಸಿದ್ಧನಿಲ್ಲವೆಂದು ಹೇಳಿದ ನಂತರ ಈಗ ಅದಕ್ಕೆ ಸಿದ್ಧರಾದಿರಿ ಎಂದು. ಅಥವಾ ಮಿರ್ಝಾ ಸಾಹೇಬರು ವಾದ ಪ್ರತಿವಾದ ಮಾಡಲು ಸಿದ್ಧರಾಗದಿದ್ದರೆ 'ನೋಡಿರಿ ಮಿರ್ಝಾ ಸಾಹೇಬರು ಸೋತು ಹೋದರು' ಎಂದು ಹೇಳಿ ಅವರ ವಿರುದ್ಧ ಗುಲ್ಲೆಬ್ಬಿಸಬಹುದು.

ಆಗ ಮೌಲವಿ ಉಮರ್ ದೀನ್ ಹೇಳಿದರು: ಇವೆಲ್ಲಾ ಏಕೆ? ನಾನು ಹೋಗಿ ಮಿರ್ಝಾ ಸಾಹೇಬರನ್ನು ಕೊಂದು ಬಿಡುತ್ತೇನೆ. ಆಗ ಮೌಲವಿ ಮುಹಮ್ಮದ್ ಹುಸೈನ್ ಹೇಳಿದರು: ಅಂತಹ ಅನೇಕ ಪ್ರಯತ್ನಗಳನ್ನು ಈಗಾಗಲೇ ಮಾಡಲಾಗಿದೆ ಎಂದು.

ಈ ಮಾತನ್ನು ಆಲಿಸಿದಾಗ ಮೌಲವಿ ಉಮರ್ ದೀನ್ ಸಾಹೇಬರು ಹೀಗೆ ಯೋಚಿಸಿದರು: ಯಾರನ್ನು ಅಲ್ಲಾಹನು ಇಷ್ಟೆಲ್ಲಾ ರೀತಿಯಲ್ಲಿ ಸಂರಕ್ಷಿಸುತ್ತಾನೋ ಅಂತಹ ವ್ಯಕ್ತಿ ನಿಜವಾಗಿಯೂ ಅಲ್ಲಾಹನ ಕಡೆಯಿಂದಲೇ ಆಗಮಿಸಿದವರು ಆಗಿರುವರು.

ಅನಂತರ ಮೌಲವಿ ಉಮರ್ ದೀನ್ ಬೈಅತ್ ಮಾಡಿದರು. ಶತ್ರು ಕೊಲ್ಲಲು ಪ್ರಯತ್ನಿಸಿದರೂ ಅಲ್ಲಾಹನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ರಕ್ಷಿಸಿದನು. ವಿರೋಧಿಸುವವ ಒಳ್ಳೆಯ ಪ್ರಕೃತಿ ಹೊಂದಿದವನಾಗಿದ್ದರೆ ಅವನೇ ಪ್ರಭಾವಿತನಾಗಿ ತನ್ನ ಹೃದಯವನ್ನು ಪರಿಶುದ್ಧಗೊಳಿಸುತ್ತಾನೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ವಿರುದ್ಧ ಅವರು ಹತ್ಯೆಗೆ ಪ್ರಯತ್ನಿಸಿದರೆಂಬ ಸುಳ್ಳು ಆರೋಪ ಹೊರಿಸಿ ಕ್ರೈಸ್ತರು ಹೂಡಿದ ಮೊಕದ್ದಮೆಯನ್ನು ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೀಗೆ ವಿವರಿಸಿದ್ದಾರೆ:

ಮಾರ್ಟಿನ್ ಕ್ಲಾರ್ಕ್ ಹೀಗೆ ಮೊಕದ್ದಮೆ ಹೂಡಿದ್ದನು: ನನ್ನನ್ನು ಕೊಲ್ಲಲು ಮಿರ್ಝಾ ಸಾಹೇಬರು ಒಬ್ಬನನ್ನು ಕಳುಹಿಸಿದ್ದಾರೆ ಎಂದು. ಇದಕ್ಕೆ ಸಾಕ್ಷ್ಯ ಹೇಳಲು ಮೌಲವಿ ಮುಹಮ್ಮದ್ ಹುಸೈನ್ ಬಟಾಲವಿ ಒಪ್ಪಿಕೊಂಡಿದ್ದರು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಅಲ್ಲಾಹನು ಮೊದಲೇ ಹೀಗೆ ತಿಳಿಸಿದ್ದನು: ಒಬ್ಬ ಮೌಲವಿ ಎದುರಿಸಲು ಬರುವನು. ಅಲ್ಲಾಹನು ಅವನನ್ನು ಹೀನಾಯಗೊಳಿಸುವನು ಎಂದು.

ಇಂತಹ ಭವಿಷ್ಯವಾಣಿ ದೊರೆತಿದ್ದರೂ ಅದು ಈಡೇರಲು ಸಾಧ್ಯವಿರುವ ಸರಿಯಾದ ಪ್ರಯತ್ನ ಮಾಡುವುದು ಆವಶ್ಯಕವಾಗಿತ್ತು. ಆ ಮೊಕದ್ದಮೆಯಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ವಕೀಲರಾಗಿ ಲಾಹೋರಿನ ಮೌಲವಿ ಫಝ್ಲ್ ದೀನ್ ಸಾಹೇಬರು ವಾದಿಸಿದ್ದರು. ಅವರು ಮೌಲವಿ ಮುಹಮ್ಮದ್ ಹುಸೈನ್‌ರೊಂದಿಗೆ ಒಂದು ಪ್ರಶ್ನೆ ಕೇಳಲು ಇಚ್ಛಿಸಿದರು. ಆ ಪ್ರಶ್ನೆ ಮೌಲವಿ ಮುಹಮ್ಮದ್ ಹುಸೈನರಿಗೆ ಅಪಮಾನಕರವಾಗಿತ್ತಿತ್ತು. ಆದರೆ, ಆ ಪ್ರಶ್ನೆ ಕೇಳಲು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ತನ್ನ ವಕೀಲರಿಗೆ ಅನುಮತಿ ನೀಡಲಿಲ್ಲ. ಮೌಲವಿ ಫಝ್ಲ್ ದೀನ್ ಸಾಹೇಬರು ಅಹ್ಮದಿಯರಾಗಿರಲಿಲ್ಲ. ಅವರು ಹನಫಿಗಳ ಲೀಡರ್ ಆಗಿದ್ದರು. ಹಾಗೂ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರೊಂದಿಗೆ ಧಾರ್ಮಿಕ ನಂಬಿಕೆಗಳ ಬಗ್ಗೆ ವಿರೋಧ ಹೊಂದಿದ್ದರು. ಹೀಗಿದ್ದರೂ ಅವರು ಅಹ್ಮದಿಯೇತರ ಮುಸ್ಲಿಮರ ಯಾವುದೇ ಸಭೆಗಳಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ವೈಯಕ್ತಿಕವಾಗಿ ಯಾರಾದರೂ ನಿಂದಿಸಿದರೆ ಅವರು ಅದನ್ನು ಬಲವಾಗಿ ವಿರೋಧಿಸುತ್ತಿದ್ದರು. ಅವರು ಹೇಳುತ್ತಿದ್ದರು: ನಂಬಿಕೆಗಳ ವಿಷಯ ಬೇರೆ – ಆದರೆ ನಾನು ಮಿರ್ಝಾ ಸಾಹೇಬರನ್ನು ಎಂತಹ ಉತ್ತಮ ಸ್ವಭಾವ ಗುಣ ಹೊಂದಿದವರನ್ನಾಗಿ ಕಂಡೆನೆಂದರೆ ನಮ್ಮ ಮತಪಂಡಿತರಲ್ಲಿ ಯಾರೂ ಅವರಿಗೆ ಸರಿ ಸಾಟಿಯಾಗಲಾರರು. ಅವರ ಸ್ವಭಾವ ಗುಣಗಳ ಬಗ್ಗೆ ನಾನು ಹಲವು ಬಾರಿ ಪರೀಕ್ಷಿಸಿದ್ದೇನೆ. ಅವರ ಸ್ಥಾನವನ್ನು ಯಾವ ಮೌಲವಿಯೂ ತಲಪಲಾರನೆಂದು ನಾನು ಕಂಡಿದ್ದೇನೆ.

ನೀವು ನೋಡಿರಿ, ಸಾಕ್ಷಿ ಹೇಳಲು ಬರುವ ಮೌಲವಿ ಅಪಮಾನಿತನಾಗುವ ಭವಿಷ್ಯವಾಣಿ ದೊರೆತಿದೆ. ಆ ಮೌಲವಿ ನೀಡುವ ಸಾಕ್ಷ್ಯ ಹೇಗಿತ್ತೆಂದರೆ, ಅದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಅಪರಾಧಿ ಎಂದು ಸಾಬೀತುಗೊಳಿಸುವಂತಹದಾಗಿತ್ತು. ಆದರೆ ಸಾಕ್ಷಿದಾರನ ಸ್ಥಾನವನ್ನು ಕುಗ್ಗಿಸಲಿಕ್ಕಾಗಿ ಅವರನ್ನು ಅಪಮಾನಿಸುವಂತಹ ಒಂದು ಪ್ರಶ್ನೆ ಕೇಳಲು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ತನ್ನ ವಕೀಲರಿಗೆ ಅನುಮತಿ ನೀಡಲಿಲ್ಲ.

ಆದರೆ ಅಲ್ಲಾಹನು ಪ್ರಕಟಿಸಿದ ಭವಿಷ್ಯವಾಣಿ ಈಡೇರಿತು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಉನ್ನತ ಸ್ವಭಾವ ಗುಣ ಪ್ರಕಟಗೊಂಡಿತು. ಅದನ್ನು ಅಹ್ಮದಿಯಲ್ಲದ ಅವರ ವಕೀಲರು ಸಹ ಗುರುತಿಸಿದರು. ಇನ್ನೊಂದೆಡೆ ಮೌಲವಿ ಮುಹಮ್ಮದ್ ಹುಸೈನ್ ಅಪಮಾನಿತನಾದರು. ಅದು ಹೇಗೆಂದರೆ: ನ್ಯಾಯಾಧೀಶರು ಮೊದಲು ಕಠೋರ ಮನೋಭಾವ ಹೊಂದಿದ್ದರು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಹಿಡಿಗೂಡಲು ಅವರು ಬಯಸಿದ್ದರು. ಆದರೆ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಚಹರೆ ನೋಡಿದಾಗ ಅವರ ಮನೋಭಾವ ಬದಲಾಯಿತು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು

ಅಪರಾಧಿಯಾಗಿ ಆ ನ್ಯಾಯಾಧೀಶನ ಮುಂದೆ ಹಾಜರುಪಡಿಸಲಾಗಿದ್ದರೂ ಆ ನ್ಯಾಯಾಧೀಶ ಒಂದು ಕುರ್ಚಿ ತರಿಸಿ ಅವರನ್ನು ಅದರಲ್ಲಿ ಕುಳಿತುಕೊಳ್ಳಲು ಹೇಳಿದರು. ಮೌಲವಿ ಮುಹಮ್ಮದ್ ಹುಸ್ಯೆನ್ ಈ ಮೊಕದ್ದಮೆಯ ಸಾಕ್ಷಿಯಾಗಿ ಆಗಮಿಸುವಾಗ ಅವರು ಹೀಗೆ ಯೋಚಿಸಿರಬಹುದು: ಒಂದೋ ಮಿರ್ಝಾ ಸಾಹೇಬರನ್ನು ಬೇಡಿ ತೊಡಿಸಿ ತಂದಿರಬಹುದು ಅಥವಾ ಅಪಮಾನಕರ ಸ್ಥಿತಿಯಲ್ಲಿ ನಿಲ್ಲಿಸಿರಬಹುದು ಎಂದು.

ಆದರೆ, ಹಝ್ರತ್ ಮಸೀಹ್ ಮೌಊದ್ ಅಲ್ಯೆಹಿಸ್ಸಲಾಮರು ಕುರ್ಚಿಯಲ್ಲಿ ಕುಳಿತಿರುವುದನ್ನು ಕಂಡಾಗ ಆ ಮೌಲವಿ ತಬ್ಬಿಬ್ಬಾದರು. ಅವರು ಕೋಪಾವೇಶದಿಂದ ನನಗೆ ಸಹ ಕುರ್ಚಿ ಕೊಡಿರಿ ಎಂದು ನ್ಯಾಯಾಧೀಶರೊಡನೆ ಕೇಳಿದರು. ಇದರಿಂದ ನ್ಯಾಯಾಧೀಶರಿಗೂ ಕೋಪ ಬಂದು ಅವರು ಹೇಳಿದರು– "**ಬಕ್ ಬಕ್ ಮತ್‌ಕರ್ ಪೀಚೇ ಹಟ್** ಪಾದರಕ್ಷೆಗಳನ್ನಿರಿಸುವಲ್ಲಿ ನಿಲ್ಲು." ಇದನ್ನು ಕೇಳಿ ಅಲ್ಲಿದ್ದ ಪೇದೆ ಮೌಲವಿಯನ್ನು ತಳ್ಳಿ ಹಿಂದೆ ನಿಲ್ಲಿಸಿದನು. ಮೌಲವಿ ಯೋಚಿಸಿದರು ನನ್ನ ಅಪಮಾನವಾದುದು ಹೊರಗೆ ನಿಂತಿರುವ ಸಾವಿರಾರು ಜನರಿಗೆ ತಿಳಿದರೆ ಅವರೊಂದಿಗೆ ಏನು ಹೇಳಲಿ? ಮೌಲವಿ ಕೋರ್ಟ್ ಹಾಲ್‌ನಿಂದ ಹೊರಗೆ ಬಂದು ವರಾಂಡದಲ್ಲಿದ್ದ ಒಂದು ಖಾಲಿ ಕುರ್ಚಿಯಲ್ಲಿ ಕುಳಿತು ಬಿಟ್ಟರು. ನಾನು ಇಲ್ಲಿ ಕುರ್ಚಿಯಲ್ಲಿ ಕುಳಿತುಕೊಂಡರೆ ಒಳಗೆ ಸಹ ನನಗೆ ಕುರ್ಚಿ ಲಭಿಸಿತೆಂದು ಜನರು ತಿಳಿಯುವರು ಎಂದು ಮೌಲವಿ ಭಾವಿಸಿದರು. ಆದರೆ ಆ ಪೇದೆ ಅವರನ್ನು ಅಲ್ಲಿಂದಲೂ ಎಬ್ಬಿಸಿದನು. ಮೊಕದ್ದಮೆಯ ತೀರ್ಮಾನ ಏನಾಗುತ್ತದೆ ಎಂದು ನೋಡಲು ಬಂದಿದ್ದ ಜನರು ಹೊರಗೆ ಚಾದರುಗಳನ್ನು ಹಾಸಿ ಕುಳಿತಿದ್ದರು. ಅಲ್ಲಿದ್ದ ಒಂದು ಚಾದರಿನಲ್ಲಿ ಸ್ವಲ್ಪ ಸ್ಥಳವಿತ್ತು. ಅಲ್ಲಿ ಹೋಗಿ ಈ ಮೌಲವಿ ಕುಳಿತರು. ಆ ಚಾದರ ಮಿಯಾಂ ಮುಹಮ್ಮದ್ ಬಕ್ಷ್ ಎಂಬವರದಾಗಿತ್ತು. ಅವರು ಅಹ್ಮದಿಯಾಗಿರಲಿಲ್ಲ. ಆದರೂ ಅವರು ಮೌಲವಿಯೊಂದಿಗೆ ಸಿಟ್ಟಿನಿಂದ ಹೇಳಿದರು: ನನ್ನ ಚಾದರನ್ನು ಬಿಟ್ಟು ಎದ್ದು ಹೋಗು. ನೀನು ನನ್ನ ಚಾದರನ್ನು ಕೊಳಕು ಮಾಡಿದೆ. ನೀನು ಮುಸ್ಲಿಮನಾಗಿದ್ದರೂ ಕ್ರೈಸ್ತ ಜನರಿಗೆ ಬೆಂಬಲ ನೀಡಿ ಸಾಕ್ಷಿ ಹೇಳಲು ಬಂದಿರುವೆ. ಮೌಲವಿ ಆ ಚಾದರನ್ನು ಸಹ ಬಿಟ್ಟು ಎದ್ದು ಹೋಗಬೇಕಾಯಿತು. ಈ ರೀತಿ ಅಲ್ಲಾಹನು ಮೌಲವಿಯನ್ನು ಎಲ್ಲಾ ಕಡೆಗಳಲ್ಲೂ ಅಪಮಾನಿಸಿದನು.

ನೋಡಿರಿ, ಅಲ್ಲಾಹನು ಶತ್ರುವಿನ ಕೈಯಿಂದ ಹಝ್ರತ್ ಮಸೀಹ್ ಮೌಊದ್ ಅಲ್ಯೆಹಿಸ್ಸಲಾಮರನ್ನು ರಕ್ಷಿಸಿದನು. ಇದು ಅಲ್ಲಾಹನ **ಆಯಾತುಲ್ ಬಯ್ಯಿನಾತ್** (ಸ್ಪಷ್ಟವಾದ ದೃಷ್ಟಾಂತಗಳಲ್ಲಿ) ಸೇರಿದೆ. ಅಲ್ಲಾಹನು ನ್ಯಾಯಾಧೀಶರಾಗಿದ್ದ ಸರ್ ಡಗ್ಲಸ್‌ರಿಗೆ ದೃಷ್ಟಾಂತಗಳನ್ನು ತೋರಿಸಿದನು. ಆ ದೃಷ್ಟಾಂತಗಳು ಸರ್ ಡಗ್ಲಸ್ ಮೃತರಾಗುವ ತನಕ ಅವರ ನೆನಪಿನಲ್ಲಿ ಇದ್ದುವು. ಸರ್ ಡಗ್ಲಸ್‌ರ ಹೆಡ್ ಕ್ಲಾರ್ಕ್ ಆಗಿದ್ದ ಗುಲಾಮ್ ಹೈದರ್ ಅಂದಿನ ಒಂದು ಸಂಭವ ಹೀಗೆ ವಿವರಿಸುತ್ತಾರೆ:

"ಸರ್ ಡಗ್ಲಸ್ ರಸ್ತೆಯಲ್ಲಿ ಅತ್ತ ಇತ್ತ ನಡೆದಾಡುವುದನ್ನು ನಾನು ಕಂಡೆನು. ಅವರ ಮುಖ ಗಾಬರಿಗೊಂಡಿತ್ತು. ಅವರ ಸಮೀಪ ನಾನು ಹೋದಾಗ ಅವರು ಹೇಳಿದರು: ನಾನು ಮಿರ್ಝಾ ಸಾಹೇಬರನ್ನು ಕಂಡ ನಂತರ ನನಗೆ ಹೀಗೆ ಕಾಣಿಸುತ್ತಿದೆ ಎಂದರೆ ಒಬ್ಬ ದೇವದೂತ ಮಿರ್ಝಾ ಸಾಹೇಬರ ಕಡೆಗೆ ಕೈ ತೋರಿಸಿ ನನ್ನೊಂದಿಗೆ ಹೇಳುತ್ತಿದ್ದಾನೆ: ಮಿರ್ಝಾ ಸಾಹೇಬರು ಅಪರಾಧಿಯಲ್ಲ. ಅವರು ಯಾವ ತಪ್ಪನ್ನೂ ಮಾಡಿಲ್ಲ ಎಂದು. ಅನಂತರ ನಾನು ನ್ಯಾಯಾಲಯದ ಕೆಲಸ ಮುಗಿಸಿ ಇಲ್ಲಿಗೆ ಬಂದು ನಡೆದಾಡುವಾಗ ನಾನು ಆ ಕಡೆಗೆ ಹೋದರೆ ಅಲ್ಲಿ ಮಿರ್ಝಾ ಸಾಹೇಬರ ರೂಪ ಕಾಣಿಸುತ್ತದೆ. ಅವರು ಹೇಳುತ್ತಿದ್ದಾರೆ: ನಾನು ಈ ಅಪರಾಧ ಮಾಡಿಲ್ಲ. ನನ್ನ ಮೇಲಿನ ಆರೋಪ ಸುಳ್ಳಾಗಿದೆ. ನಾನು ಈ ಕಡೆಗೆ ಬಂದಾಗಲೂ ಅಲ್ಲಿ ಸಹ ಮಿರ್ಝಾ ಸಾಹೇಬರನ್ನು ಕಾಣುತ್ತೇನೆ. ಅವರು ಹೇಳುತ್ತಾರೆ: ನಾನು ತಪ್ಪು ಮಾಡಿಲ್ಲ. ನನ್ನ ಮೇಲೆ ಸುಳ್ಳು ಆರೋಪ ಹೊರಿಸಲಾಗಿದೆ ಎಂದು. ನನ್ನ ಸ್ಥಿತಿ ಹೀಗೆಯೇ ಮುಂದುವರಿದರೆ ನಾನು ಹುಚ್ಚನಾಗಿ ಬಿಡುವೆನು ಎಂದು ತೋರುತ್ತದೆ. ಆಗ ನಾನು ಹೇಳಿದೆ (ಎಂದರೆ ಗುಲಾಮ್ ಹೈದರ್ ಹೇಳಿದರು). 'ಸರ್, ಪೋಲೀಸ್ ಸುಪರಿಂಟೆಂಡೆಂಟ್ ಇಲ್ಲೇ ಇದ್ದಾರೆ ಅವರು ಸಹ ಆಂಗ್ಲೇಯರೇ ಆಗಿದ್ದಾರೆ. ಅವರನ್ನು ಕರೆಸಿ ಮಾತನಾಡಿದರೆ ನಿಮಗೆ ಸ್ವಲ್ಪ ನೆಮ್ಮದಿ ಸಿಗಬಹುದು.'

ಪೋಲೀಸ್ ಸುಪರಿಂಟೆಂಡೆಂಟರೊಂದಿಗೆ ಸರ್ ಡಗ್ಲಸ್ ಹೇಳಿದರು: ನೋಡಿರಿ, ನನ್ನ ಸ್ಥಿತಿ ಹೀಗಿದೆ. ನಾನು ಹುಚ್ಚನಾಗಿ ಬಿಡುವೆನೇ ಅನಿಸುತ್ತದೆ. ಆಗ ಸುಪರಿಂಟೆಂಡೆಂಟ್ ಹೇಳಿದರು: "ನೀವು ಸಾಕ್ಷಿಗಳನ್ನು ಪಾದರಿಗಳ ವಶದಲ್ಲಿ ಬಿಟ್ಟಿರುವಿರಿ. ಅವರು ಕಲಿಸಿಕೊಟ್ಟ ರೀತಿ ಸಾಕ್ಷಿಗಳು ನ್ಯಾಯಾಲಯದಲ್ಲಿ ಹೇಳುತ್ತಾರೆ. ಸಾಕ್ಷಿದಾರರನ್ನು ಪೋಲೀಸರ ವಶಕ್ಕೆ ನೀಡಿರಿ ಅನಂತರ ನೋಡುವ. ಸಾಕ್ಷಿಗಳು ಏನು ಹೇಳುತ್ತಾರೆಂದು."

ಹಾಗೆ ಹತ್ಯೆ ಮಾಡಲು ತನ್ನನ್ನು ಮಿರ್ಝಾ ಸಾಹೇಬರು ಕಳುಹಿಸಿದರೆಂದು ಹೇಳುತ್ತಿದ್ದ ಅಬ್ದುಲ್ ಹಮೀದನನ್ನು ಕೂಡಲೇ ಸರ್ ಡಗ್ಲಸ್ ಪೋಲೀಸರ ವಶಕ್ಕೆ ನೀಡಲು ಆಜ್ಞಾಪಿಸಿದರು. ಹಾಗೆ ಅಬ್ದುಲ್ ಹಮೀದನನ್ನು ಪೋಲೀಸರ ವಶಕ್ಕೆ ನೀಡಲಾಯಿತು. ಆತನನ್ನು ಪೋಲೀಸರು ವಿಚಾರಣೆ ನಡೆಸಿದಾಗ ಅವನು ಹೇಳಿದನು: ನಾನು ಹೇಳಿದುದೆಲ್ಲಾ ಸುಳ್ಳು ಎಂದು. ನಂತರ ಅಬ್ದುಲ್ ಹಮೀದ್ ಎಲ್ಲಾ ವಿಷಯ ತಿಳಿಸಿದನು. ಅನಂತರ ನ್ಯಾಯಾಲಯದಲ್ಲಿ ಸರ್ ಡಗ್ಲಸ್ ಹಝ್ರತ್ ಮಸೀಹ್ ಮೌಊದ್ ಅಲ್ಯೆಹಿಸ್ಸಲಾಮರನ್ನು ಆರೋಪಗಳಿಂದ ಮುಕ್ತರನ್ನಾಗಿ ಮಾಡಿ ನಿರ್ದೋಷಿ ಎಂದು ಘೋಷಿಸಿದರು. ನೋಡಿರಿ ಇವುಗಳೆಲ್ಲಾ ನಮಗೆ **ಆಯಾತೆ ಬಯ್ಯಿನಾತ್**ಗಳಾಗಿವೆ.

ಅಲ್ಲಾಹನು ಸರ್ ಡಗ್ಲಸ್‌ರಿಗೆ ಬೇರೆ ಕೆಲವು ದೃಷ್ಟಾಂತಗಳನ್ನೂ ತೋರಿಸಿರುವನು. ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ನನ್ನೊಂದಿಗೆ ಸರ್ ಡಗ್ಲಸ್ ಹೇಳಿದರು: ಒಮ್ಮೆ ಒಬ್ಬ ಹಿಂದೂಸ್ಥಾನಿ ಐ.ಸಿ.ಎಸ್. ಅಧಿಕಾರಿ ನನ್ನೊಂದಿಗೆ ನನ್ನ ಜೀವಿತದ ಅದ್ಭುತ ಘಟನೆಗಳಲ್ಲಿ ಒಂದನ್ನು ವಿವರಿಸುವಂತೆ ಕೇಳಿಕೊಂಡಾಗ ನಾನು ಮಿರ್ಝಾ ಸಾಹೇಬರಿಗೆ ಸಂಬಂಧಿಸಿದ ಘಟನೆಯನ್ನು ಅವರಿಗೆ ಹೇಳಿದೆ. ನಾನು ಈ ವಿವರಣೆ

ನೀಡುತ್ತಿದ್ದಾಗಲೇ ನನ್ನ ಪಹರೆದಾರನು ಬಂದು ಒಬ್ಬ ವ್ಯಕ್ತಿ ತಮ್ಮ ಸಂದರ್ಶನಕ್ಕೆ ಬಂದಿದ್ದಾನೆಂದು ಹೇಳಿದನು. ನಾನು ಅವನನ್ನು ಒಳಗೆ ಬರಲು ಹೇಳಿದಾಗ ಯುವಕನಾದ ಅವನು ಹೇಳಿದನು: ಸರ್ ನನ್ನ ಪಿತ ಪಾದರಿ ವಾರಿಸ್ ದೀನ್ ನಿಮಗೆ ಪರಿಚಯವಿದೆ. ಅವರು ನಿಧನ ಹೊಂದಿದರೆಂದು ತಂತಿ ಸಂದೇಶ ಬಂದಿದೆ ಎಂದು.

ವಾರಿಸ್ ದೀನ್ ಓರ್ವ ಪಾದ್ರಿಯಾಗಿದ್ದ. ಆತ ಡಾಕ್ಟರ್ ಮಾರ್ಟಿನ್ ಕ್ಲಾರ್ಕ್‌ನನ್ನು ಸಂತೋಷಪಡಿಸಲು ಅವರೊಂದಿಗೆ ಸೇರಿ ಈ ಎಲ್ಲಾ ಮೊಕದ್ದಮೆಯ ಉಪಾಯ ಹೂಡಿದ ವ್ಯಕ್ತಿಯಾಗಿದ್ದರು. ಸರ್ ಡಗ್ಲಸ್ ಆ ಯುವಕನೊಂದಿಗೆ ಹೇಳಿದರು: ನಾನು ಈಗ ತಾನೆ ಅವರ ಬಗ್ಗೆ ಮಾತನಾಡುತ್ತಿದ್ದೆ ಎಂದು. ಆ ವೇಳೆಯಲ್ಲೇ ಆ ಯುವಕ ಅಲ್ಲಿಗೆ ಬಂದುದು ಮತ್ತು ತನ್ನ ತಂದೆಯ ಮರಣ ವಾರ್ತೆಯನ್ನು ತಿಳಿಸಿದುದು ಒಂದು ಅದ್ಭುತ ಆಕಸ್ಮಿಕವಾಗಿತ್ತು.

ಸರ್ ಡಗ್ಲಸ್, ತನ್ನ ಮರಣ ಪರ್ಯಂತ ಅಹ್ಮದಿಯರನ್ನು ಭೇಟಿಯಾದಾಗಲೆಲ್ಲಾ ಈ ಎಲ್ಲಾ ಸಂಭವಗಳನ್ನು ವಿವರಿಸುತ್ತಿದ್ದರು.

ಇವು **ಆಯಾತೆ ಬಯ್ಯಿನಾತ್**‌ಗಳಲ್ಲಿ ಸೇರಿವೆ. ಅಲ್ಲಾಹನು ತನ್ನ ಪ್ರವಾದಿಗಳ ಸತ್ಯತೆಯನ್ನು ಪ್ರಕಟಿಸಲು ಇಂತಹ ದೃಷ್ಟಾಂತಗಳನ್ನು ತೋರಿಸುತ್ತಾನೆ. ಸತ್ಯವಿಶ್ವಾಸಿಯಾದವನು ನಿಜವಾದ ಸತ್ಯ ವಿಶ್ವಾಸಿಯಾಗಲು ಪ್ರಯತ್ನಿಸಬೇಕು. ಒಬ್ಬನು ವಾಸ್ತವಿಕವಾಗಿಯೂ ಸತ್ಯವಿಶ್ವಾಸಿಯಾಗಿದ್ದರೆ ಅಲ್ಲಾಹನು ನಿಶ್ಚಯವಾಗಿಯೂ ರಹಸ್ಯವಾಗಿ ಎಂತಹ ಪರಿಸ್ಥಿತಿ ಉಂಟು ಮಾಡುತ್ತಾನೆಂದರೆ ಈ ದೃಷ್ಟಾಂತಗಳ ಮೂಲಕ ಅವನ ವಿಶ್ವಾಸ ತಾಜಾ ಆಗುತ್ತಾ ಇರುತ್ತವೆ. ವಾಸ್ತವಿಕವಾಗಿ ಇಂತಹ ವಿಶ್ವಾಸ ಹೊಂದದೆ ಇದ್ದರೆ ಯಾವುದೇ ಪ್ರಯೋಜನವಿಲ್ಲ. ಯಾವ ವಿಶ್ವಾಸ ಕಣ್ಣುಗಳನ್ನು ತೆರೆಯುವುದಿಲ್ಲವೋ ಮತ್ತು ಅಂಧಕಾರದಲ್ಲೇ ಇರಿಸುತ್ತದೆಯೋ ಅದರಿಂದ ಪ್ರಯೋಜನವೇನು? ಯಾರು ಈ ಲೋಕದಲ್ಲಿ ಅಂಧನಾಗಿರುತ್ತಾನೋ ಪರಲೋಕದಲ್ಲೂ ಅಂಧನಾಗಿಯೇ ಇರುವನು. ಯಾರಿಗೆ ಈ ಲೋಕದಲ್ಲಿ **ಆಯಾತೆ ಬಯ್ಯಿನಾತ್** (ಸ್ಪಷ್ಟ ದೃಷ್ಟಾಂತಗಳು) ಕಾಣಿಸುವುದಿಲ್ಲವೋ ಅವನಿಗೆ ಪರಲೋಕದಲ್ಲಿ ಸಹ ಸ್ಪಷ್ಟ ದೃಷ್ಟಾಂತಗಳು ಕಾಣಿಸಲಾರವು.

ದೃಷ್ಟಾಂತಗಳ ಬಗ್ಗೆ ಹೇಳುವುದಾದರೆ ದೃಷ್ಟಾಂತಗಳು ಈಗಲೂ ಕಾಣಿಸುತ್ತವೆ. ಒಂದು ದೃಷ್ಟಾಂತ ಕಾಣಿಸಿಕೊಂಡು ನೂರು ವರ್ಷಗಳಾದುವು. ಆ ದೃಷ್ಟಾಂತ ಮತ್ತೆ ಪುನಃ ಈ ರೀತಿ ಪುನರಾವರ್ತಿಸುತ್ತಿದೆ. ಕರ್ನಲ್ ಡಗ್ಲಸರ ಮೊಮ್ಮಗ ನನಗೆ ಪತ್ರ ಬರೆದಿದ್ದಾರೆ– ನಾನು ಬೈಅತ್ ಮಾಡಲು ಇಚ್ಛಿಸುತ್ತೇನೆ ಎಂದು. ನನ್ನ ಅಜ್ಜ ಮಾಡಿದ ಯಾವುದೋ ಸತ್ಕರ್ಮದ ಕಾರಣದಿಂದ ನನ್ನ ಹೃದಯದಲ್ಲಿ ನಾನು ಅಹ್ಮದಿಯಾ ಜಮಾಅತಿನಲ್ಲಿ ಸೇರಬೇಕೆಂಬ ತೀವ್ರವಾದ ಇಚ್ಛೆ ತಲೆದೋರುತ್ತಿದೆ– ಎಂದು ಅವರು ಹೇಳುತ್ತಾರೆ. ಸರ್ ಡಗ್ಲಸರಿಗೆ ಸತ್ಯದ ದರ್ಶನವಾಗಿತ್ತು. ಆದರೆ ಅವರು ಸತ್ಯವನ್ನು ಸ್ವೀಕರಿಸಿರಲಿಲ್ಲ. ಆದರೆ ಇಂದು ನಾನು ಆ ಸತ್ಯವನ್ನು ಅಂಗೀಕರಿಸುತ್ತೇನೆ ಎಂದು ಅವರು ಬರೆದಿದ್ದಾರೆ. ಮಾರ್ಟಿನ್ ಕ್ಲಾರ್ಕ್‌ನ ಮೊಮ್ಮಗನ ಬಗ್ಗೆ ಇದರ ಮೊದಲೇ ಹೇಳಿದ್ದೇನೆ. ಅವರು ಇಲ್ಲಿಗೆ ಬಂದು ಸ್ಪಷ್ಟವಾಗಿ ಹೇಳಿದರು: ನನ್ನ ಅಜ್ಜ ತಪ್ಪು ಮಾಡಿದ್ದರು. ಹಝ್ರತ್ ಮಿರ್ಝಾ ಸಾಹೇಬರು ಸತ್ಯವಂತರಾಗಿದ್ದರು ಎಂದು.

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: "ಸತ್ಯವಿಶ್ವಾಸಿ ಯಾವಾಗಲೂ ಪ್ರಾರ್ಥಿಸುತ್ತಾ ಇರಬೇಕು. ಮತ್ತು ಅಲ್ಲಾಹನ ನಾಮ ಸ್ಮರಣೆ ಮಾಡುತ್ತಾ ಇರಬೇಕು. ಇಸ್ಲಾಮ್ ಮತ್ತು ತನ್ನ ಅಸ್ತಿತ್ವದ ಸತ್ಯತೆಯನ್ನು ಅಲ್ಲಾಹನು ಅವನಿಗೆ ಸ್ಪಷ್ಟಪಡಿಸಿಕೊಡುವ ದಿನವನ್ನು ಅವನು ಕಾಣುವ ಭಾಗ್ಯವನ್ನು ಪಡೆಯುವನು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಪ್ರಕಾಶಮಾನವಾದ ಮುಖವನ್ನೂ ಅಲ್ಲಾಹನ ತೇಜೋಮಯವಾದ ವದನವನ್ನೂ ಕಾಣುವ ಭಾಗ್ಯವನ್ನು ಸತ್ಯವಿಶ್ವಾಸಿ ಪಡೆಯುವನು.

ಹೀಗೆ ಆದರೆ ರಾತ್ರಿ ಮತ್ತು ಹಗಲು, ಸಂತೋಷದ ವರ್ಷ ಮತ್ತು ಕಷ್ಟಕಾಲದ ವರ್ಷ, ಸತ್ಯ ವಿಶ್ವಾಸಿಗೆ ಎಲ್ಲವೂ ಸಮವಾಗಿರುವುದು. ಅವನಿಗೆ ಒಂದೇ ಭಾವನೆ ಇರುತ್ತದೆ. ಅವನು ದೇವ ಪ್ರೀತಿಯಲ್ಲಿ ಮುಳುಗಿರುತ್ತಾನೆ. ಇಂತಹ ವ್ಯಕ್ತಿ ಯಾವಾಗಲೂ ಸಂತೋಷದಿಂದಲೂ ಸಮಾಧಾನದಿಂದಲೂ ಇರುತ್ತಾನೆ. ಅವನು ಯಾರಿಗೂ ಭಯಪಡಲಾರನು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ವಿರುದ್ಧ ಕರಮ್ ದೀನ್ ಮೊಕದ್ದಮೆ ಹೂಡಿದಾಗ ಅಲ್ಲಿನ ಮ್ಯಾಜಿಸ್ಟ್ರೇಟ್ ಹಿಂದುವಾಗಿದ್ದರು. ಆರ್ಯಸಮಾಜಿಗಳು ನ್ಯಾಯಾಧೀಶರೊಂದಿಗೆ ಹೇಳಿದರು– ಮಿರ್ಝಾ ಸಾಹೇಬರಿಗೆ ಖಂಡಿತವಾಗಿಯೂ ಶಿಕ್ಷೆ ನೀಡಬೇಕು ಎಂದು. ಆ ನ್ಯಾಯಾಧೀಶರು ಅವರಿಗೆ ಅದರ ಬಗ್ಗೆ ವಾಗ್ದಾನ ಸಹ ನೀಡಿದ್ದರು. ಖ್ವಾಜಾ ಕಮಾಲುದ್ದೀನ್‌ರಿಗೆ ಈ ವಿಷಯ ತಿಳಿದಾಗ ಅವರು ಹೆದರಿದರು. ಆಗ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದರು: ಖ್ವಾಜಾ ಸಾಹೇಬರೇ, ನೀವು ಏಕೆ ಹೆದರುತ್ತೀರಿ ಅಲ್ಲಾಹನ ಸಿಂಹದ ಮೇಲೆ ಕೈ ಹಾಕಬಲ್ಲವನು ಯಾರಿದ್ದಾನೆ?

ಇಬ್ಬರು ನ್ಯಾಯಾಧೀಶರ ಕೋರ್ಟ್‌ಗಳಲ್ಲಿ ಮೊಕದ್ದಮೆ ನಡೆಯಿತು. ಅವರಿಬ್ಬರಿಗೂ ಶಿಕ್ಷೆ ಲಭಿಸಿತು. ಆರ್ಯಸಮಾಜಿಗಳಿಗೆ ತಮ್ಮ ಉದ್ದೇಶದಲ್ಲಿ ಜಯ ಸಿಗಲಿಲ್ಲ.

ಒಟ್ಟಾರೆ ಹೇಳುವುದಾದರೆ ಮನುಷ್ಯನು ಅಲ್ಲಾಹನಿಗೆ ಸೇರಿದವನಾದರೆ ಲೋಕದ ಪ್ರತಿಯೊಂದು ವಸ್ತು ಅವನದಾಗುತ್ತದೆ. ಅಲ್ಲಾಹನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರೊಂದಿಗೆ ಹೇಳಿರುವನು:

**"ಜೀ ತೂ ಮೇರಾ ರಹೇಂ ಸಬ್‌ಜಗ್ ತೇರಾ ಹೋ"** (ನೀನು ಅಲ್ಲಾಹನಿಗೆ ಸೇರಿದವನಾದರೆ ಲೋಕವೆಲ್ಲವೂ ನಿನ್ನದಾಗುವುದು.) ಆದುದರಿಂದ ನೀವು ಅಲ್ಲಾಹನಿಗೆ ಸೇರಿದವರಾಗಿರಿ. ನೀವು ಅದರ ಬಗ್ಗೆ ಪ್ರಾರ್ಥಿಸಿರಿ. ಈ ರೀತಿ ನೀವು ನೆಮ್ಮದಿ ಪಡೆಯುವಿರಿ. ನಿಮ್ಮ ಸಂತಾನ ಸಹ ನೆಮ್ಮದಿಗಳಿಸುವುದು. ನಿಮ್ಮ ಬಂಧು ಮಿತ್ರರೂ ನೆಮ್ಮದಿಗಳಿಸುವರು.

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: "ಪಾದರಿ ಮಾರ್ಟಿನ್ ಕ್ಲಾರ್ಕ್ ಮೊಕದ್ದಮೆ ಹೂಡಿದಾಗ ನಾನು ಗಾಬರಿಗೊಂಡು

ಪ್ರಾರ್ಥನೆಯಲ್ಲಿ ಮುಳುಗಿದೆ. ಅದೇ ದಿನ ರಾತ್ರಿ ನನಗೆ ಈ ರೀತಿ ಕನಸು ಬಿತ್ತು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಪೋಲೀಸರು ನಿಲ್ಲಿಸಿದ್ದಾರೆ. ಅವರ ಹಿಂದೆ ಮತ್ತು ಮುಂದೆ ಕಟ್ಟಿಗೆ ಜಮಾಯಿಸಲಾಗಿದೆ. ತಲೆ ಬಿಟ್ಟು ಉಳಿದ ಭಾಗದಲ್ಲಿ ಕಟ್ಟಿಗೆ ಇದೆ. ಪೋಲೀಸರು ಸೀಮೆಎಣ್ಣೆ ಸುರಿದು ಬೆಂಕಿ ಹಚ್ಚಲು ಪ್ರಯತ್ನ ಮಾಡುತ್ತಿದ್ದಾರೆ. ನಾನು ಮುಂದೆ ಹೋಗಿ ಬೆಂಕಿಯನ್ನು ನಂದಿಸಲು ಪ್ರಯತ್ನ ಮಾಡಿದೆ. ಅಷ್ಟರಲ್ಲಿ ಮೂರು ನಾಲ್ಕು ಸಿಪಾಯಿಗಳು ಬಂದು ನನ್ನನ್ನು ಹಿಡಿದರು. ನಾನು ತುಂಬಾ ಹೆದರಿದೆ– ಇವರೇನಾದರೂ ಬೆಂಕಿ ಹಚ್ಚಿ ಬಿಡುವರೇ ಎಂಬ ಭಯದಿಂದ. ಆಗ ಅಕಸ್ಮಿಕವಾಗಿ ನನ್ನ ದೃಷ್ಟಿ ಮೇಲ್ಭಾಗಕ್ಕೆ ಹರಿಯಿತು. ಅಲ್ಲಿ ಬಾಗಿಲ ಮೇಲೆ ದಪ್ಪ ಸುಂದರ ಅಕ್ಷರಗಳಲ್ಲಿ ಹೀಗೆ ಬರೆದುದಾಗಿ ಕಂಡೆನು– **‘ಅಲ್ಲಾಹನ ಪ್ರಿಯದಾಸರಾದವರನ್ನು ಸುಟ್ಟು ಹಾಕಬಲ್ಲವರು ಯಾರಿದ್ದಾರೆ?**’ ಸತ್ಯವಿಶ್ವಾಸಿಗಳಿಗೆ ಪರಲೋಕದಲ್ಲಿ ಮಾತ್ರವಲ್ಲ ಇಹ ಲೋಕದಲ್ಲೂ ರಕ್ಷಣೆ ಸಿಗುತ್ತದೆ.”

ಕ್ಯಾಪ್ಟನ್ ಡಗ್ಲಸ್ ಓರ್ವ ಹಿಂದುಸ್ಥಾನಿ ಐ.ಸಿ.ಎಸ್ ಆಫೀಸರೊಂದಿಗೆ ಮಾತನಾಡಿದ ಬಗ್ಗೆ ನಾನು ಹೇಳಿದ್ದೆ. ಆಗ ಕ್ಯಾಪ್ಟನ್ ಡಗ್ಲಸ್ ಅವರೊಡನೆ ಹೀಗೆ ಸಹ ಹೇಳಿದ್ದರು: “ಮಿರ್ಝಾ ಸಾಹೇಬರ ಹಾಗೆ ವಿಶಾಲ ಹೃದಯಿಯಾದ ಬೇರೆ ಯಾರನ್ನೂ ನಾನು ಕಂಡಿಲ್ಲ. ಅವರ ಮೇಲೆ ಅತ್ಯಂತ ಅಪಾಯಕಾರಿ ಮೊಕದ್ದಮೆ ಹೂಡಲಾಗಿತ್ತು. ಅವರ ವಿರುದ್ಧ ಸುಳ್ಳು ಆರೋಪ ಹೊರಿಸಿದವರ ಮೇಲೆ ಮಾನಹಾನಿಯ ಮೊಕದ್ದಮೆ ದಾಖಲಿಸಬಹುದೆಂದು ನ್ಯಾಯಾಲಯವು ಅವರೊಡನೆ ಹೇಳಿದರೂ ಸಹ ‘ನಾನು ಅವರ ಮೇಲೆ ಮೊಕದ್ದಮೆ ಹೂಡಲು ಬಯಸುವುದಿಲ್ಲ’ ಎಂದು ಅವರು ಹೇಳಿದ್ದರು.”

ಎಲ್ಲಾ ವಿಧಗಳ ವಿರೋಧಗಳಿದ್ದರೂ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಸಂರಕ್ಷಿಸಲ್ಪಟ್ಟರು. ಅವರ ಜಮಾಅತ್ ಸಹ ಸಂರಕ್ಷಿಸಲ್ಪಟ್ಟಿತು. ಮತ್ತು ಅಲ್ಲಾಹನ ವಾಗ್ದಾನ ಪ್ರಕಾರ ಅಭಿವೃದ್ಧಿಗಳಿಸುತ್ತಾ ಹೋಯಿತು. ಖಾದಿಯಾನ್ ಸಹ ಅಭಿವೃದ್ಧಿಗೊಂಡಿತು. ಈ ಅಭಿವೃದ್ಧಿಯ ಬಗ್ಗೆ ವಿವರಿಸುತ್ತಾ ಹಝ್ರತ್ ಮುಸ್ಲಿಹ್ ಮೌಊದ್ ಹೀಗೆ ಹೇಳುತ್ತಾರೆ: “ಒಂದು ಕಾಲದಲ್ಲಿ ಅಹ್ಮದಿಯರನ್ನು ಇಲ್ಲಿನ ಮಸ್‌ಜಿದ್‌ಗಳಿಗೆ ಹೋಗಲು ಬಿಡುತ್ತಿರಲಿಲ್ಲ. ಮಸ್‌ಜಿದ್‌ಗೆ ಹೋಗುವವರು ಹೊಂಡಗಳಿಗೆ ಬೀಳಲಿ ಎಂದು ಹೊಂಡ ತೋಡುತ್ತಿದ್ದರು. ಬಾವಿಯಿಂದ ನೀರನ್ನು ಸೇದಲು ಬಿಡುತ್ತಿರಲಿಲ್ಲ. ಕುಂಬಾರರು ಅಹ್ಮದಿಯರಿಗೆ ಮಡಿಕೆಗಳನ್ನು ಮಾರಾಟ ಮಾಡಬಾರದೆಂದು ಆಜ್ಞಾಪಿಸಲಾಗುತ್ತಿತ್ತು. ಒಂದು ಕಾಲದಲ್ಲಿ ಹೀಗೆ ಕಷ್ಟಗಳಿದ್ದುವು. ಈಗ ಆ ಜನರು ಎಲ್ಲಿದ್ದಾರೆ. ಅವರ ಮಕ್ಕಳು ಅಹ್ಮದಿಗಳಾಗಿದ್ದಾರೆ. ಒಂದು ಕಾಲದಲ್ಲಿ ಅಹ್ಮದಿಯ್ಯತ್ತನ್ನು ಅಳಿಸಿ ಬಿಡಲು ಪ್ರಯತ್ನ ಮಾಡಿದವರ ಮಕ್ಕಳು ಇಂದು ಅಹ್ಮದಿಯ್ಯತ್ತನ್ನು ಪ್ರಚಾರ ಮಾಡುವುದರಲ್ಲಿ ಮಗ್ನರಾಗಿದ್ದಾರೆ. ಇದು ಅಲ್ಲಾಹನ ವಿಶಿಷ್ಟ ಸಹಾಯದ ಚಿಹ್ನೆಯಾಗಿದೆ. ಅಲ್ಲಾಹನು ಲೋಕದಲ್ಲಿ ಎಲ್ಲೆಲ್ಲಿ ಜಮಾಅತನ್ನು ಹಬ್ಬಿಸಿದ್ದಾನೆಂದು ನೋಡಿರಿ.”

ಇವುಗಳೆಲ್ಲಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಸತ್ಯತೆಗೆ ಸಾಕ್ಷ್ಯಗಳಾಗಿವೆ. ಅನಂತರ ಜಾರಿಗೊಂಡ ಖಿಲಾಫತ್ ಜೊತೆಗೆ ಅಲ್ಲಾಹನ ಬೆಂಬಲದ ಸಾಕ್ಷ್ಯಾಧಾರಗಳಾಗಿವೆ. ಇವು ನಮ್ಮ ವಿಶ್ವಾಸವನ್ನು ವರ್ಧಿಸುವವುಗಳಾಗಿವೆ. ಅಲ್ಲಾಹನು ನಾವು ಈ ವಿಷಯಗಳನ್ನು ಯಾವಾಗಲೂ ನೆನಪಿನಲ್ಲಿ ಇರಿಸುವಂತೆ ಮಾಡಲಿ. ಇವು ನಮ್ಮ ಮತ್ತು ನಮ್ಮ ಸಂತಾನಗಳ ವಿಶ್ವಾಸವನ್ನು ವರ್ಧಿಸುತ್ತಾ ಯಾವಾಗಲೂ ಮುಂದುವರಿಯುವಂತಾಗಲಿ – ಆಮೀನ್.

---------------*****---------------

*Friday Sermon delivered by Hadrath Khaleefatul Masih Al Khamis*(atba)

*at Masjid Baithul Futhuh, London on 12-12-2014.*

Summarized by *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M P Ibrahim | ***Typing:*** U Basheer Ahmad

*Published By:* **Kannada Isha'at Team** for **Nazarath Nashr-O-Isha'ath, Qadian**

***Email***: *khutuba.kannada@gmail.com*